ಶ್ರೀ. ಅಂಣಾಸಾಹೇಬ ಸಹಸ್ರಬುದ್ಧೆ

ಮಹಾರಾಷ್ಟ್ರದ ಪ್ರಸಿದ್ಧ ತತ್ವನಿಷ್ಠ ಗಾಂಧೀವಾದಿ ಮುಖಂಡರೂ ಧೇಯವಾದಿ ಕರ್ಮಯೋಗಿಗಳೂ ಬ್ರಹ್ಮಚಾರಿಗಳೂ ಆದ ಶ್ರೀ. ಅಣ್ಣಾಸಾಹೇಬ ಸಹಸ್ರಬುದ್ಧೆಯವರೂ ನಮ್ಮ ಜೊತೆಗೆ ಹಿಂಡಲಗಿ ಜೇಲಿನಲ್ಲಿ ಸ್ಥಾನಬದ್ಧರಾಗಿ ಎರಡು ವರುಷಗಳ ವರೆಗೆ ಇದ್ದರು. ತರುಣ ಕಾರ್ಯಕರ್ತರ ಮೇಲೆ ಅವರ ಪ್ರೀತಿ ಬಹಳ. ಚೂರುಚಾರು ತತ್ವಬಿಟ್ಟು ನಡೆದರೂ ಅಡ್ಡಿಯಿಲ್ಲ ಆದರೆ ಪುರುಷಾರ್ಥ ಮಾಡಬೇಕೆಂಬುದೇ ಅವರ ಕಟಾಕ್ಷ. ಗಾಂಧೀವಾದದ ಮುಸುಕಿನಲ್ಲಿ ಹೇಡಿತನ ತೋರಿಸುವದನ್ನು ಅವರು ಉಗ್ರವಾಗಿ ಖಂಡಿಸುತ್ತಿದ್ದರು. ಪುಣೆಯಲ್ಲಿ ಅವರು ಬಾಂಬು ತಯಾರಿಸುತ್ತಿರುವರೆಂಬ ಸಂಶಯದಿಂದ ಪೋಲೀಸರು ಅವರನ್ನು ಬಂಧಿಸಿದ್ದರು. ಅವರು ದಿನಾಲು ಸ್ಥಾನಬದ್ಧರ ಬರಾಕಿನಲ್ಲಿ ವ್ಯವಸ್ಥಿತವಾದ ಕಾರ್ಯಕ್ರಮವನ್ನು ರೂಢಿಗೊಳಿಸಿದರು. ಮುಂಜಾನೆ ಸರಿಯಾಗಿ ೪ ಗಂಟೆಗ ಏಳುವದು, ೪॥ ಯಿಂದ ೫॥ ವರೆಗೆ ಸಾಮೂಹಿಕ ಪ್ರಾರ್ಥನೆ ವಾಚನ, ೫॥ ದಿಂದ ೭ ರ ವರೆಗೆ ಸ್ನಾನ ವ್ಯಾಯಾಮ ಆಸನ ಮುಂತಾದವು, ೭ ರಿಂದ ೯ ರ ವರೆಗೆ ನೂಲುವದು, ೯ ರಿಂದ ೧೧ ಅಡಿಗೆ ಊಟ, ೧೨ ರಿಂದ ೨ ವಿಶ್ರಾಂತಿ, ೨ ರಿಂದ ೪ ವಾಚನ ನೂಲುವದು, ೪ ರಿಂದ ೬ ರ ವರೆಗೆ ಅಡ್ಡಾಡುವದು, ಊಟ. ರಾತ್ರಿ ೭ ರಿಂದ ೮॥ ವಾಚನ ಭಾಷಣ ಮುಂತಾದವು. ೮॥ ಯಿಂದ ೯॥ ಸಾಮೂಹಿಕ ಪ್ರಾರ್ಥನೆ. ಹೀಗೆ ವೇಳಾಪತ್ರಿಕೆಯಂತೆ ಆಶ್ರಮ ರೀತಿಯ ಕಾರ್ಯಕಲಾಪ ನಡೆಯುತ್ತಿದ್ದವು. ಶ್ರೀ. ಅಂಣಾಸಾಹೇಬರು ಬರಾಕಿಗೆ ಹಿರಿಯರಾಗಿ ನೇತೃತ್ವವಹಿಸಿ ಕಾರ್ಯಸಾಗಿಸುತ್ತಿದ್ದರು. ಇಂಥ ಮಹನೀಯರ ಸತ್ಸಂಗದಿಂದ ಎಲ್ಲ ಕಾರ್ಯಕರ್ತರಿಗೆ ಆದ ಲಾಭ ಅಷ್ಟಿಷ್ಟಲ್ಲ.

ಹುಬ್ಬಳ್ಳಿಯ ಕಠೋರ ದೇಶಭಕ್ತರೊ ಸ್ವತಂತ್ರ ವಿಚಾರ ಧಾರೆಯವರೂ ಆದ ಶ್ರೀ. ವಿಷ್ಣು ಕೃಷ್ಣ ಗೋಖಲೆಯವರು ರಾತ್ರಿ ವೇಳೆಯಲ್ಲಿ ನಕ್ಷತ್ರಗಳನ್ನು ತೋರಿಸುತ್ತ ಜ್ಯೋತಿಃ ಶಾಸ್ತ್ರದ ಪರಿಚಯ ಮಾಡಿಕೊಡುತ್ತಿದ್ದರು.

ಶ್ರೀ. ದುಬೆಯವರ ದುರ್ಬಲತೆ.

ಒಂದು ದಿನ ಭಾಜೀ ಕಮೀಟಿಯು ಜನರು ನಮ್ಮ ಬರಾಕಿಗೆ ಬಂದಾಗ ಒಂದು ಘಟನೆ ನಡೆಯಿತು. ಭಾಜಿ ಕಮೀಟಿಯೆಂದರೆ ಜೇಲಿನಲ್ಲಿಯ ಅಡಿಗೆ ಊಟ ಮುಂತಾದವು ಸರಿಯಾಗಿ ನಡೆದಿವೆಯೋ, ಜನರ ತಕರಾರು ಏನಾದರೂ ಅವೆಯೋ,

ಎಂಬದನ್ನು ಕೇಳಿ ಹೋಗಲು ಸರಕಾರದವರು ತಮ್ಮ ರಾಜನಿಷ್ಠ ಜನರನ್ನೊಳಗೊಂಡು ಕೆಲ ಅಧಿಕಾರಿಗಳಿಂದ ಕೂಡಿದ ಒಂದು ಕಮೀಟಿಯನ್ನು ನೇಮಿಸಿದ್ದರು. ಮೂರು ತಿಂಗಳಿಗೊಮ್ಮೆ ಈ ಕಮೀಟಿಯು ಜೇಲಿಗೆ ಬಂದು ಹೋಗುತ್ತಿತ್ತು. ಅವರ ಶಿಫಾರಸು ಗಳಿಗೂ ಯಾವದೇ ಬೆಲೆಯಿದ್ದಿಲ್ಲ. ಇಂಥ ಒಂದು ಕಮೀಟಿಯು ಒಮ್ಮೆ ನಮ್ಮ ಸ್ಥಾನ ಬದ್ಧರ ಬರಾಕಿಗೆ ಬಂತು. ಆಗ ನಮ್ಮ ಜೊತೆಗೆ ಧಾರವಾಡದ ಶ್ರೀ. ಶಂಕರ ಕುರ್ತಕೋಟಿಯವರೂ ವಿಜಾಪೂರದ ಶ್ರೀ. ರಾಜಾರಾಮ ದುಬೆಯವರೂ ಇದ್ದರು. ಶ್ರೀ. ದುಬೆಯವರು ಈ ಕಮೀಟಿಯ ಸದಸ್ಯರನ್ನು ಕಂಡು–" ನಾನು ಯಾವ ತಪ್ಪು ಮಾಡಿದೆನೆಂದು ಸರಕಾರ ನನ್ನನ್ನು ಹಿಡಿದು ಸ್ಥಾನಬದ್ಧತೆಯಲ್ಲಿಟ್ಟಿದೆ ? ನನಗೆ ಚಳವಳಿಯ ಯಾವ ಸಂಬಂಧವೂ ಇಲ್ಲ. ಹೀಗಿದ್ದರೂ ನನ್ನನ್ನು ಹಿಡಿದು ಇಟ್ಟಿರುವದು ನ್ಯಾಯವೇ? ನನ್ನನ್ನು ಕೂಡಲೆ ಬಿಡುವಂತೆ ರಿಪೋರ್ಟು ಮಾಡಬೇಕು" ಎಂದು ಕೇಳಿಕೊಂಡರು. ಇದು ನಮ್ಮ ಕೆಲಸವಲ್ಲ ಎಂದು ಹೇಳಿ ಕಮಿಟಿಯವರು ತಿರುಗಿ ಹೊರಟು ಹೋದರು.

ಭಾಜಿ ಕಮೀಟಿಯವರು ಹೋದ ಬಳಿಕ ಶ್ರೀ. ಶಂಕರ ಕುರ್ತಕೋಟಿಯವರು ಶ್ರೀ. ದುಬೆಯವರ ಹತ್ತರ ಹೋಗಿ " ದುಬೆಯವರೇ ನೀವು ಎಲ್ಲ ಸ್ಥಾನಬದ್ಧರ ಮಾನ ಕಳೆದು ಬಿಟ್ಟಿರಿ. ಭಾಜಿ ಕಮೀಟಿಯು ಮುಂದೆ ಚಳವಳಿಗೆ ನಿಮ್ಮ ಯಾವ ಸಂಬಂಧವೂ ಇಲ್ಲವೆಂದು ಯಾಕೆ ಹೇಳಿದಿರಿ? ಇದು ನಿಮ್ಮ ಹಾಗೂ ನಮ್ಮೆಲ್ಲರ ಅಪಮಾನವಲ್ಲವೇ?" ಎಂದು ಕೇಳಿದರು. ಆಗ ಕೂಡಲೆ ಶ್ರೀ. ದುಬೆಯವರು ಕ್ರೋಧಸಂತಪ್ತರಾಗಿ ತಮ್ಮ ಕಾಲೊಳಗಿನ ಪಾದರಕ್ಷೆಯನ್ನು ತಕ್ಕೊಂಡು ಕುರ್ತಕೋಟಿಯವರಿಗೆ ಫಟ್‌ಫಟ್ ಎಂದು ಎರಡು ಪೆಟ್ಟು ಹಾಕಿದರು ! ಆಲ್ಲಿಯೇ ಸಮೀಪದಲ್ಲಿದ್ದ ಶ್ರೀ. ಅಣ್ಣಾ ಸಾಹೇಬರು ಮುಂದೆ ಹೋಗಿ ಕುರ್ತಕೋಟಿಯವರನ್ನು ಎಳೆದು ಕೊಂಡು ಬಂದರು. ಶ್ರೀ. ಕುರ್ತ ಕೋಟಿಯವರು ನಮಗೆಲ್ಲ ತಿಳಿದಂತೆ ಶೀಘ್ರ ಕೋಪಿಗಳು, ಹೊಡದಾಟ ಪ್ರಿಯರು. ಶ್ರೀ. ದುಬೆಯವರಿಗಿಂತ ತರೀರ ಸಾಮರ್ಥ್ಯದಲ್ಲಿ ಸಹ ಬಲಿಷ್ಟರೂ ಆಗಿದ್ದರು. ಬರಾಕದ ಎಲ್ಲ ಜನರೂ ಈ ಘಟನೆಯನ್ನು ನೋಡಿ ದಿಙ್ಮೂಢರಾದೆವು. ಕುರ್ತಕೋಟಿಯವರು ಆಶ್ಚರ್ಯಕಾರಕ ಸಂಯಮ ತಳೆದರು. ಜೇಲಜೀವನಕ್ಕೆ ಬೇಸತ್ತು ನಿರಾಶರಾಗಿ ಶ್ರೀ. ದುಬೆಯವರು ಈ ಅವಿವೇಕತನ ಮಾಡಿರುವರೆಂದೂ ಅವರ ಬಗ್ಗೆ ವಿಚಾರಿಸ ಬಾರದೆಂದೂ ಎಲ್ಲರೂ ನಿರ್ಣಯಿಸಿದರು.

ಈ ರೀತಿಯ ಅಳುಬುರಕ ದೇಶಭಕ್ತರೇ ಮುಂದೆ ದೊಡ್ಡ ಮುಖಂಡರಾಗಿ ಮೆರೆದರು. ಪಾರ್ಲಿಮೆಂಟಿನ ಸಭಾಸದರಾದರು, ಕೇಂದ್ರ ಉಪಮಂತ್ರಿಯ ಸ್ಥಾನಕ್ಕೆ ಸಮಾನವಾದ ಅಧಿಕಾರದ ಗದ್ದುಗೆಯೆನ್ನು ಏರಿದರು. ಸ್ವಾಭಿಮಾನಿ ಕುರ್ತೆಕೋಟಿಯವರು ಕಡೆತನಕ ಸ್ವಯಂ ಸೇವಕರಾಗಿಯೇ ಉಳಿದರು ।

ಖಾನೆಕೊ ನ್ಯೆಂ ಔರ್ ಲಡನೆಕೊ ಮೇರಾ ಬಡಾ ಭಾಯಿ!

೧೯೨೮ ನೇ ಇಸವಿಯಲ್ಲಿ ನಡೆದ ಮತ್ತೊಂದು ಚಿಕ್ಕ ಘಟನೆ ನೆನಪಿಗೆ ಬರುತ್ತದೆ. ಚಿಕ್ಕ ನವಕರಿಗೆ ರಾಜೀನಾಮೆ ಕೊಟ್ಟು ೧೯೨೧ ನೇ ಇಸವಿಯಲ್ಲಿ ಮನೆತನವೆಲ್ಲ ಖಾದಿ ಧಾರಿಯಾಗಿ ಚಳವಳಿಯಲ್ಲಿ ಭಾಗವಹಿಸಿ ಮೂರು ವರುಷ ರಾಷ್ಟ್ರೀಯ ಶಾಲೆ ನಡಿಸಿ ಮೂರು ವರುಷ ಖಾದಿಕಾರ್ಯಕರ್ತನಾಗಿ ಕೆಲಸ ಮಾಡಿದ ನಾನು, ೧೯೨೮ ರ ಸುಮಾರಿಗೆ ದೇಶವೆಲ್ಲ ನಿರಾಶೆಯ ಕತ್ತಲಲ್ಲಿ ಮುಳುಗಿದಾಗ, ನಮ್ಮ ಮನೆತನದ ವತನೀ ಹಕ್ಕಾದ ಕುಲಕರ್ಣಿಕಿ ಮಾಡಬೇಕೆಂದು ಅದರ ನೇಮಣೂಕಿಗಾಗಿ ಚಿಕ್ಕೋಡಿ ರೋಡ ಸ್ಟೇಶನ್ ಹತ್ತರದ ಜೋಡಟ್ಟಿ ಸರಕಾರಿ ಬಂಗ್ಲೆಗೆ ಪ್ರಾಂತ ಸಾಹೇಬರ ಕಡೆಗೆ ಹೋಗಿದ್ದೆ. ಪ್ರಾಂತ ಸಾಹೇಬರಾಗಿದ್ದ ಶ್ರೀ. ಜಿ. ಎ. ಹಿರೇಮಠ ಎಂಬವರು ನನಗೆ ಒಂದು ಕರಾರು ಹಾಕಿದರು. ಟೆರಿಟೋರಿಯಲ್ ಫೋರ್ಸದಲ್ಲಿ (ಸರಕಾರಿ ಪ್ರಾದೇಶಿಕ ಸೈನ್ಯ ಪಡೆ) ಸೇರುವದಾದರೆ ಕೂಡಲೇ ಕುಲಕರ್ಣಿ ಕೆಲಸ ಕೊಡುಪೆನೆಂದು ಅವರು ಹೇಳಿದಾಗ "ಅದನ್ನು ನಾನು ಮಾಡಲಾರೆ, ಸರಕಾರದ ನವಕರಿ ನಾನು ಮಾಡುವದಿಲ್ಲ. ಕುಲಕರ್ಣಿಕಿಯು ವತನ ಇರುವದರಿಂದ ಅದು ನವಕರಿಯಲ್ಲ" ಎಂದು ಮುಂತಾಗಿ ಹೇಳಿದೆ. ಅಲ್ಲಿಯೇ ಶ್ರೀ ಎಂ. ಪಿ. ಪಾಟೀಲರು (ಸಂಕೇಶ್ವರ) ಮಿಲಿಟರಿ ವೇಷಧಾರಿಯಾಗಿ ಕುಳಿತಿದ್ದರು. ಅವರು ಅದೇ ತಾನೆ ಎಲ್. ಎಲ್. ಬಿ. ಆಗಿ ಬಂದಿದ್ದರು. ಟೆರಿಟೋರಿಯಲ್ ಫೋರ್ಸಿನಲ್ಲಿ ಅವರು ಜಿಲ್ಲಾ ಕಮಾಂಡಂಟರಾಗಿದ್ದರು. ಅವರು ನನ್ನನ್ನು ಬದಿಗೆ ಕರೆದು "ಖಾದಿಯ ಈ ಹುಚ್ಚು ಚ್ಚಾರ ಅರಿವೆ ಧರಿಸಿರುವ ನೀವು ಪಾಚ್ಛಾಪುರದವರೇ" ಎಂದು ಕೇಳಿದರು. ನಾನು "ಆಹುದು" ಎಂದೆ, ಅವರು ಮತ್ತೆ ಹೇಳಹತ್ತಿದರು "ಹುಚ್ಚಾ, ನಿನಗೆ ಸರಕಾರದರಬಾರದಲ್ಲಿ ಮಾನ ಸಿಗುವದು. ಸುಮ್ಮನೆ ನಮ್ಮ ಟೆರಿಟೋರಿಯಲ್ ಫೋರ್ಸಿಗೆ ಸೇರು. ಕುಲಕರ್ಣಿಕಿ ನೇಮಣೂಕಿಯೂ ಆಗುವದು ಸರಕಾರಿ ಮಾನವೂ ಸಿಗುವದು" ಎಂದು ಪರಿಪರಿಯಾಗಿ ಹೇಳಿದರೂ ನಾನದಕ್ಕೆ ಒಪ್ಪದೆ ತಿರುಗಿ ಬಂದೆ.

೧೯೪೨ ರ ಆಗಸ್ಟ ಕ್ರಾಂತಿ ಆರಂಭವಾದ ಮೇಲೆ ಪಂತ ಬಾಳೇಕುಂದ್ರಿಯಲ್ಲಿ ಭೂಗತ ಕಾರ್ಯಕರ್ತರ ಗುಪ್ತ ಸಭೆ ಕೂಡಿದಾಗ ಶ್ರೀ. ಎಂ. ಪಿ. ಪಾಟೀಲರೂ ಬಂದಿದ್ದರು. ಆವರು "ಈ ಚಳವಳಿಯು ನಮ್ಮಂಥವರಿಗೆ ನೀಗುವದಲ್ಲ. ಹೊರಗೆ ಉಳಿಯಲು ನನಗೆ ಸಾಧ್ಯವಿಲ್ಲ" ಎಂದು ಎರಡೇ ಎರಡು ಮಾತು ಹೇಳಿ ಬೆಳಗಾವಿಗೆ ಹೋಗಿ ಪೋಲೀಸರಿಂದ ಬಂಧಿತರಾಗಿ ಜೇಲಿಗೆ ಹೋಗಿ ಬಿಟ್ಟರು. ಇವರೇ ಮುಂದೆ ಶಾರೀರಿಕವಾಗಿ ಅಸಮರ್ಥರಾಗುವ ವರೆಗೂ ಅಖಂಡವಾಗಿ ಮಂತ್ರಿಗಳಾದರು ! ಕಾಂಗ್ರೆಸಿನ ಕಡೆಗೆ ತಿರುಗಿ ಸಹ ನೋಡದೆ ವಕೀಲಿ ಮಾಡಿ ಹಣ ಗಳಿಸುವದರಲ್ಲಿ ನಿರತರಾಗಿ, ೧೯೪೨ ರ ಕೊನೆಯ ಹೋರಾಟದ ಕಾಲಕ್ಕೆ ಹೆದರಿ ಚಳುವಳಿಗೆ ಸಂಬಂಧವಿದ್ದವರಾರೂ ತಮ್ಮ ಮನೆಗೆ ಬರಕೂಡದೆಂದು ಹೇಳಿದ ಶ್ರೀ. ಬಳವಂತರಾವ ದಾತಾರ ಅವರು ಸ್ವರಾಜ ಸಿಕ್ಕ ನಂತರ ಸಾಯುವ ತನಕ ಕೇಂದ್ರದ ಗೃಹಖಾತೆಯಲ್ಲಿ ಮಂತ್ರಿಗಳಾಗಿದ್ದರು! ಹೇಳುವ ಉದ್ದೇಶವಿಷ್ಟೇ, ಅಧಿಕಾರಸ್ಥಾನಕ್ಕೆ ಕಚ್ಚಾಡಿದಂತೆ ತ್ಯಾಗಕ್ಕೆ, ಕಷ್ಟಕ್ಕೆ ಕಚ್ಚಾಡುವವರು ವಿರಳ. ಇರಲಿ.